# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ




### ಏಳು

**ಡ**ರಬನ್ ರೇವುಪಟ್ಟಣದಲ್ಲಿ ಹರಿಲಾಲ ಕಾಲಿಟ್ಟಾಗ ಬೆಳಗಿನ ಬಿಸಿಲು ಪಸರಿಸುತ್ತಿತ್ತು. ಹಬಶಿಯ (ಅಬಿಸೀನಿಯಾ ದೇಶದ) ಕಪ್ಪು ಕೂಲಿಯಾಳುಗಳು ಅತ್ತ ಇತ್ತ ಓಡುತ್ತಿದ್ದರು. ಅಲ್ಲಿ ಮಧ್ಯಮ ನಿಲುವಿನ ಭಾರತೀಯರು ಸಹ ಉತ್ಸಾಹದಿಂದ ಓಡಾಡುತ್ತಿದ್ದರು. ಎತ್ತರದ ನಿಲುವಿನ ಬಿಳಿ ಮತ್ತು ದಷ್ಟಪುಷ್ಟ ಆಂಗ್ಲರು ದರ್ಪದಿಂದ ಈ ಇಬ್ಬರ ನಡುವೆ ಹಾದು ಹೋದಾಗ, ಗುಂಪಿನಲ್ಲಿ ನಿಂತಿದ್ದ ಹಬಶಿ ಮತ್ತು ಭಾರತೀಯರು ಬದಿಗೆ ಸರಿದು ಅವರಿಗೆ ಹಾದಿಯನ್ನು ಸುಗಮಗೊಳಿಸುತ್ತಿದ್ದರು. ಇದನ್ನು ನೋಡಿ ಹರಿಲಾಲನಿಗೆ ವಿಚಿತ್ರವೆನಿಸಿತು. ಆ ಬಿಳಿಯ ಅಧಿಕಾರಿಗಳನ್ನು ನೋಡಿದೊಡನೆಯೇ ಆ ಬಹಶಿಗಳ ಮುಖದಲ್ಲಿ ಭಯದ ಸಂಚಾರವಾಗುತ್ತಿತ್ತು. ಆದರೆ ಭಾರತೀಯರ ಮುಖದಲ್ಲಿ ಇಂಥ ಭಯವಿರಲಿಲ್ಲ, ಆದರೆ ಅಪ್ರಿಯ ಮತ್ತು ಸಂದೇಹದ ಭಾವನೆಗಳಿದ್ದವು. ಹರಿಲಾಲ ತನ್ನ ಲಗ್ಗೇಜನ್ನು ಸಂಭಾಳಿಸಿಕೊಳ್ಳುತ್ತಾ ಮೆಲ್ಲನೆ ಗುಂಪಿನಲ್ಲಿ ಜಾಗ ಮಾಡಿಕೊಳ್ಳುತ್ತಾ ಒಂದು ಬದಿಗೆ ನಿಂತ. ತಾನು ಬರುವ ಬಗ್ಗೆ ಅವನು ಬಾಪೂ ಅವರಿಗೆ ಪತ್ರವನ್ನು ಬರೆದಿದ್ದ. ತನ್ನನ್ನು ಕರೆದೊಯ್ಯಲು ಯಾರಾದರೂ ಬಂದಿರಬೇಕೆಂಬ ಭರವಸೆಯಲ್ಲಿ ಅವನು ಸುತ್ತಮುತ್ತ ದೃಷ್ಟಿಯನ್ನು ಹರಿಸಿದ.

'ಹರಿಲಾಲ...' ಗಟ್ಟಿಯಾಗಿ ಕರೆದ ಧ್ವನಿ ಕೇಳಿಸಿತು. ಸದ್ದುಗಳ ಸಮುದ್ರದಿಂದ ಗಾಳಿಯನ್ನು ಸೀಳುತ್ತಾ ಬಂದ ಈ ಧ್ವನಿ ಹರಿಲಾಲನ ಕಿವಿಗಳಿಗೆ ಬಿತ್ತು. ಸ್ವಲ್ಪ ದೂರದ ಗುಂಪಿನಲ್ಲಿ ಸಿಲುಕಿದ್ದ ಪರಾಗರು ಕೈಯೆತ್ತಿ ಅವನ ಗಮನವನ್ನು ತಮ್ಮತ್ತ ಸೆಳೆಯಲು ಪ್ರಯತ್ನಿಸುತ್ತಿದ್ದರು. ಹರಿಲಾಲನ ಚಿಂತೆ ದೂರವಾಯಿತು. ಪರಾಗರು ಬಂದಾಗ ಇನ್ನಾವ ಚಿಂತೆಯಿರಲು ಸಾಧ್ಯ! ಹರಿಲಾಲ ತನ್ನೆರಡು ಕೈಗಳನ್ನು ಮೇಲೆತ್ತಿ ಪರಾಗರ ಕರೆಗೆ ಉತ್ತರಿಸಿದ. ಆರೇಳು ವರ್ಷಗಳ ಹಿಂದೆ ಅವನು ಬಾಪೂ ಅವರೊಂದಿಗೆ ಇಲ್ಲಿದ್ದಾಗ, ಪರಾಗರನ್ನು ನೋಡಿದ್ದ. ಪರಾಗರು ಬಾಪೂ ಅವರೊಂದಿಗ ಹೋರಾಟದಲ್ಲಿ ತೊಡಗಿಸಿಕೊಂಡಿರುವ ವಿಷಯ ಹರಿಲಾಲನಿಗೆ ತಿಳಿದಿತ್ತು. ವಯಸ್ಸಿನಲ್ಲಿ ಪರಾಗರು ಹರಿಲಾಲನಿಗಿಂತ ದೊಡ್ಡವರೇ ಆಗಿದ್ದರು. ಆದರೆ ಅವರನ್ನು ಗುರುತಿಸುವಲ್ಲಿ ಹರಿಲಾಲ ತಪ್ಪು ಮಾಡಲಿಲ್ಲ, ಪರಾಗರೂ ಸಹ ಹರಿಲಾಲನನ್ನು ಗುರುತಿಸಿದರು.

'ಪರಾಗ್ ಭೈಯ್ಯಾ, ಬಾಪೂ ಎಲ್ಲಿ? ಮಣಿಲಾಲ ಮತ್ತು ರಾಮದಾಸ್ ಎಲ್ಲರೂ ಕ್ಷೇಮ ತಾನೇ? ಬಾ ಅವರ ಆರೋಗ್ಯ ಹೇಗಿದೆ?' ಹರಿಲಾಲ ಸಮೀಪಕ್ಕೆ ಬಂದು ಒಂದೇ ಉಸುರಿಗೆ ಕೇಳಿದ.

'ಹರಿಲಾಲ, ಎಲ್ಲರೂ ಕ್ಷೇಮವಾಗಿದ್ದಾರೆ. ನೀನು ಬರುತ್ತಿರುವ ವಿಷಯವನ್ನು ನಿನ್ನೆ ರಾತ್ರಿಯಷ್ಟೇ ಬಾ ಅವರು ನನಗೆ ಹೇಳಿದರು...' ಎಂದು ಪರಾಗರು ಸಹ ಅವನ ಸಮೀಪಕ್ಕೆ ಬಂದರು.

'ಬಾ ಹೇಳಿದರು!' ಹರಿಲಾಲನಿಗೆ ಆಶ್ಚರ್ಯವಾಯಿತು. ತಾನು ಬರುತ್ತಿರುವ ವಿಷಯವನ್ನು ಸ್ವತಃ ಬಾಪೂ ಅವರು ಪರಾಗರಿಗೆ ಯಾಕೆ ಹೇಳಲಿಲ್ಲ?

'ಬಾ ನನಗೆ ಹೇಳಿದ್ದು ಒಳ್ಳೆಯದಾಯಿತು; ಇಲ್ಲದಿದ್ದರೆ, ಈಗ ಇಲ್ಲಿ ನಿನಗೆ ಗಾಬರಿಯಾಗುತ್ತಿತ್ತು.' ಪರಾಗರು ಸ್ಪಷ್ಟಪಡಿಸಿದರು, 'ಬಾಪೂ ಈಗ ದೇಶದ ಹೋರಾಟದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಗ್ಗೆ ಎರಡು ದಿನಗಳ ಹಿಂದೆ ಪ್ರಿಟೋರಿಯಾಕ್ಕೆ ಹೋಗಿದ್ದಾರೆ. ಅವರಿಗೆ ಉಸಿರಾಡಲು ಸಹ ಬಿಡುವು ಎಲ್ಲಿ ಸಿಗುವುದು? ಬಾ ನಿನ್ನೆ ನನಗೆ, 'ಪರಾಗ್ ಭೈಯ್ಯಾ, ನೀನು ಡರಬನ್‌ಗೆ ಹೋಗಿ ಹರಿಲಾಲನನ್ನು ಕರೆದುಕೊಂಡು ಬಾ, ಅವನು ತುಂಬಾ ವರ್ಷಗಳ ನಂತರ ಬರುತ್ತಿದ್ದಾನೆ; ಪಾಪ, ಅವನು ಯೋಚನೆ ಮಾಡಬಹುದು' ಎಂದರು. ಹೀಗೆಂದು ಪರಾಗರು ಖಿಲಖಿಲನೆ ನಕ್ಕರು.

ಹರಿಲಾಲ ಅವರ ನಗುವನ್ನು ನೋಡುತ್ತಾ ನಿಂತುಬಿಟ್ಟ. ತಾನೂ ಸಹ ಪರಾಗರಂತೆ ನಗಲು ಯಾಕೆ ಸಾಧ್ಯವಾಗಲಿಲ್ಲ? ಟಿನ್‌ನ ಎರಡು ಭಾರವಾದ ಪೆಟ್ಟಿಗೆಗಳು, ಒಂದು ಉದ್ದ ಡಬ್ಬ ಮತ್ತು ಕೆಂಪು ಚಾಪೆಯಲ್ಲಿ ಸುತ್ತಿದ್ದ ಹಾಸಿಗೆ ಇಷ್ಟು ಲಗ್ಗೇಜನ್ನು ಇಬ್ಬರೂ ಹಿಡಿದು, ಗುಂಪಿನಲ್ಲಿ ರಸ್ತೆಯನ್ನು ಮಾಡಿಕೊಳ್ಳುತ್ತಾ ಹೊರ ಬಂದರು.